# ಮಹಿಳೆ ಸಮಾನತೆ ಮತ್ತು ಡಾ. ಬಿ. ಆರ್. ಅಂಬೇಡ್ಕರ್

**ಮಂಜುಳಾಕ್ಷಿ ಎಲ್.**

ಸಹಾಯಕ ಪ್ರಾಧ್ಯಾಪಕಿ, ಭಾಷಾವಿಜ್ಞಾನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ.

DOI: https://doi.org/10.5281/zenodo.15504265

## ABSTRACT:

ಕಾಲಾಂತರದಿಂದಲೂ ಮಹಿಳೆ ಸಮಾಜದಲ್ಲಿ ತನ್ನ ಅಸ್ವತ್ವಕ್ಕಾಗಿ ಒಂದಲ್ಲ ಒಂದು ರೀತಿಯಲ್ಲಿ ಧ್ವನಿ ಎತ್ತುತ್ತಲೆ ಬಂದಿದ್ದಾಳೆ. ಇದನ್ನು ನಾವು ಜನಪದ ಹೆಣ್ಣು ಅದರ ಪ್ರಕಾರವಾದ ತ್ರಿಪದಿಯಲ್ಲಿ ತನ್ನ ನೋವನ್ನು ಮತ್ತು ಸಮಾಜದ ಕಟ್ಟುಪಾಡು ಕಂದಾಚಾರಗಳನ್ನು ಮೌನವಾಗಿಯೇ ವಿರೋಧಿಸುತ್ತಾ ಬಂದಿದ್ದಾಳೆ. ಸಾಹಿತ್ಯದಲ್ಲಿ ಅವಳು ತಾಯಿಯಾಗಿ ಅಕ್ಕ–ತಂಗಿ, ನಾದಿನಿ, ಹೆಂಡತಿ, ಅತ್ತೆ ಹೀಗೆ ಅನೇಕ ಪಾತ್ರಗಳಲ್ಲಿ ಪುರುಷನೊಂದಿಗೆ ಜೀವಿಸುತ್ತಾ ಮಾನ್ಯತೆ ಪಡೆದಿದ್ದು ಅವನಿಂದ ದೇವತೆಯಾಗಿ, ಪ್ರಿಯೆಯಾಗಿ, ಕುಟುಂಬದ ಕಣ್ಣಾಗಿ, ಅವನ ಅರ್ಧಾಂಗಿಯಾಗಿದ್ದರೂ ಕೂಡ ಸಮಾಜದಲ್ಲಿ ಅವಳಿಗೆ ಅಂದಲ್ಲ ಇಂದಿಗೂ ಎರಡನೇ ದರ್ಜೆಯ ಸ್ಥಾನವಿದೆ ಅವಳನ್ನು ಪುರುಷ ಸಮಾಜ ತನ್ನ ಬಂಧಿಯಲ್ಲೇ ಬಂಧಿಸಿ ಅವಳ ಮೇಲೆ ಕಟ್ಟುಪಾಡು, ಕಂದಾಚಾರ ಪದ್ಧತಿಗಳನ್ನು ಹೇರುತ್ತಾ ಸಮಾಜದಲ್ಲಿ ಅವಳಿ ಯಾವುದೇ ಸ್ಥಾನವಿಲ್ಲದೆ ತಲಾಂತರದಿಂದ ಶಿಕ್ಷಣ, ಸಮಾಜ, ಧರ್ಮ ರಾಜಕೀಯ ಆರ್ಥಿಕ ಹೀಗೆ ಹಲವಾರು ವಲಯಗಳಿಂದ ವಂಚಿತಳಾಗಿ ಕೇವಲ ನಾಲ್ಕು ಗೋಡೆಯ ನಡುವೆ ಅವನು ಕಟ್ಟಿದ ಗೋಡೆಯಲ್ಲಿಯೇ ಅವನ ಕುಟುಂಬ ಮಕ್ಕಳ ಪಾಲನೆ ಪೋಷಣೆಯಲ್ಲಿ ತನ್ನ ಜೀವನ ಮುಡುಪಾಗಿಟ್ಟಿದ್ದವಳು ಸಂಚಿ ಹೊನ್ನಮ್ಮ, ಮತ್ತು 12ನೇ ಶನಮಾನದಲ್ಲಿ ಅಕ್ಕಮಹಾದೇವಿ ಈ ವ್ಯವಸ್ಥೆ ವಿರುದ್ಧ ಧ್ವನಿ ಎತ್ತಿ ಅವಳನ್ನು ಆ ಬಂಧನದಿಂದ ಮುಕ್ತಗೊಳಿಸಲು ಹೋರಾಡಿ ಅವಳಿಗೆ ಅಕ್ಷರ ಪ್ರಪಂಚದೆಡೆ ಕೊಂಡುಯ್ಯುವುದರ ಮೂಲಕ ಸಮಾಜ–ದಲ್ಲಿ ತನ್ನ ಅಸ್ಥತ್ವನ್ನು ಉಳಿಸಿಕೊಳ್ಳವುದರ ಬಗ್ಗೆ ಹೋರಾಡಿದಳು. ಅದೇ ರೀತಿ ಸಾವಿತ್ರಿ ಬಾಪುಲೆಯವರು ಅಕ್ಷರ ಕ್ರಾಂತಿ ಮತ್ತು ವಿಮೋಚನೆಗಾಗಿ ಒಂದು ಕ್ರಾಂತಿಯನ್ನೇ ಹುಟ್ಟಿ ಹಾಕಿದರು. ನಂತರದಲ್ಲಿ ಸಮಾಜದಲ್ಲಿ ತಾನು ವಂಚಿತವಾಗಿದ್ದ ಎಲ್ಲ ರಂಗದಲ್ಲಿಯೂ ಸಾಕ್ಷಿಯಾಗಿ ನಿಂತಳು ಇಂದು ಸಮಾಜದಲ್ಲಿ ಪುರುಷ ಸಮಾಜವನ್ನು ದಿಕ್ಕರಿಸಿ ಸ್ವತಂತ್ರ್ಯವಾಗಿ ಬಾಳುತ್ತಿದ್ದಾಳೆ ಎಂದರೆ ಅದಕ್ಕೆ ಮುಖ್ಯ ಸಾಕ್ಷಿ ಡಾ. ಬಿ. ಆರ್. ಅಂಬೇಡ್ಕರ್. ತಾವು ಕಾನೂನು ಮಂತ್ರಿಯಾಗಿದ್ದಾಗ ಹಾಗೂ ಭಾರತದಲ್ಲಿ ಇಡೀ ಸಮಾಜ ನೆಮ್ಮದಿಯಿಂದ ಬದುಕಲು ಸಹಾಯವಾಗುವಂತೆ ಸಂವಿಧಾನವನ್ನು ಕಟ್ಟಿ ಅದರಲ್ಲಿ ಮಹಿಳೆಯ ಅಭಿವೃದ್ದಿಗಾಗಿಯೇ ಕಾನೂನಿನಾತ್ಮಕವಾಗಿ ಕೆಲವು ಹಕ್ಕುಗಳನ್ನು ತಂದು ಅವಳನ್ನು ಮಾನಸಿಕವಾಗಿ ಭೌದ್ಧಿಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಗಟ್ಟಿಯಾಗಿ ನಿಂತು ಪುರುಷನಿಗೆ ಸರಿಸಮನಾಗಿ ದುಡಿತ್ತಿರುವ ಇಂದಿನ ಮಹಿಳೆ ಮುಖ್ಯ ಚೇತನ ಮತ್ತು ಬೆಂಬಲಾಗಿರುವ ಡಾ. ಅಂಬೇಡ್ಕರ್‌ವರ ಕೊಡುಗೆ, ತತ್ವ, ಸಾಧನೆಗಳ ಒಂದು ಚಿಂತನೆ ಈ ಲೇಖನದ ಉದೇಶವಾಗಿದೆ.

**KEYWORDS:**
ಮಹಿಳೆಯ ಬದುಕು, ಬದಲಾವಣೆ, ಕುಟುಂಬ, ಸಮಾಜ, ಧಾರ್ಮಿಕ, ಶೈಕ್ಷಣಿಕ.

ಪ್ರಾಚೀನ ಕಾಲದಿಂದಲೂ ಸ್ತ್ರೀಯರ ಬದುಕು ಸಮಾಜದಲ್ಲಿ ಅವ್ಯಸ್ಥಿತ ವಾಗಿದ್ದೂ ಅವಳ ಸ್ಥಾನಮಾನಗಳು ಬಹಳ ವಿರೋಧವಾದ ನೆಲೆಯಲ್ಲಿಯೇ ನೆಲೆಗೊಂಡಿರುವುದನ್ನು ಕಾಣುತ್ತಿರುವ ನಮಗೆ ಇದಕ್ಕೆ ಬಲವಾದ ಕಾರಣವಿದ್ದರೂ ಅದನ್ನು ವಿರೋಧಿಸುವುದಕ್ಕೆ ಆಗಲಿ ಅದರ ವಿರುದ್ಧ ಧ್ವನಿ ಎತ್ತುವುದಕ್ಕೆ ಆಗಲಿ ಹೆಣ್ಣಿಗೆ ಅವಕಾಶ ಸಿಕ್ಕಿದ್ದು ಅವಳು ಸರ್ಕಾರದಿಂದ ಕಾನೂನಿನಾತ್ಮಕವಾಗಿ ಬೆಂಬಲ ಪಡೆದಾಗ ಮಾತ್ರ. ಅದಕ್ಕೂ ಮುಂಚೆ ಅವಳ ಬದುಕು ಕುಟುಂಬದ ಚೌಕಟ್ಟಿನೊಳಗೆಯೇ ಪುರುಷ ಹಾಗೂ ಕುಟುಂಬ ಸದಸ್ಯರ ಅಧೀನದಲ್ಲಿ ಅವರು ಹಾಕಿದ ಕಟ್ಟುಪಾಡಿನಲ್ಲೇ ಬದುಕಬೇಕಾಗಿತ್ತು. ಅಲ್ಲದೆ ಪುರಾತನ ಸಮಾಜವು ಅವಳ ಮೇಲೆ ಅನೇಕ ನಿರ್ಬಂಧಗಳನ್ನು ಸಂಪ್ರದಾಯಿಕವಾಗಿ ಹೇರಲಾಗಿತ್ತು. ಅವಳು ಎಲ್ಲಾ ಹಕ್ಕುಗಳಿಂದಲೂ ವಂಚಿತಳಾಗಿ ಕುಟುಂಬದ ಲಾಲನೆ ಪೋಷಣೆಯಲ್ಲಿಯೇ ತನ್ನ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದೇ ಅಲ್ಲದೆ ಬಾಲ್ಯವಿವಾಹ, ಸತಿಸಹಗಮನ ಪದ್ದತಿ ಮುಂತಾದ ಕ್ರೌರ್ಯ ಪದ್ಧತಿಗಳಿಗೆ ಒಳಗಾಗಬೇಕಾಯಿತು. ಸಮಾಜದಲ್ಲಿ ಆರ್ಥಿಕವಾಗಿ, ಶೈಕ್ಷಣಿಕ, ರಾಜಕೀಯ ಹಾಗೂ ಧಾರ್ಮಿಕವಾಗಿ ಇವಳಿಗೆ ಯಾವುದೇ ಅವಕಾಶವಿರಲಿಲ್ಲ. ಸಮಾಜದಲ್ಲಿ ಹೆಣ್ಣಾಗಿ ಹುಟ್ಟುವುದೇ ಒಂದು ಶಾಪವಾಗಿದ್ದ ಕಾಲದಲ್ಲಿ ಮರಿಚಿಕೆ ಎಂಬಂತೆ ಅವಳ ಬದುಕಿನಲ್ಲಿ ದೊಡ್ಡ ಬಿರುಗಾಳಿ ಎಬ್ಬಿಸಿದವರು ಡಾ. ಬಿ. ಆರ್ ಅಂಬೇಡ್ಕರ್‌ವರು. ಸಮಾಜದಲ್ಲಿ ದಲಿತರು ಮತ್ತು ಮಹಿಳೆಯರು ಅಸ್ಪೃತೆಯ ನೆಲೆಯಲ್ಲಿ ಬದುಕಿದವರು ಹಾಗೂ ಬದುಕುತ್ತಿರುವವರು. ಸಮಾಜ ಇಂದು ವೈಜ್ಞಾನಿಕ, ಜಾಗತೀಕರಣದ ನೆಲಯಲ್ಲಿ ಸಾಗುತ್ತಿದ್ದರು ಮಹಿಳೆ ಸ್ಥಾನಮಾನ ಮಾತ್ರ ಇಂದಿಗೂ 2ನೇ ದರ್ಜೆಯದೆ ಆಗಿದೆ. ಇಂತಹ ಸೋಚನೀಯ ಸ್ಥಿತಿಯಲ್ಲಿ ಅವರ ಬೆನ್ನೆಲುಬಾಗಿ ದುಡಿದವರು ಡಾ. ಅಂಬೇಡ್ಕರ್ ರವರು. ಈ ಲೇಖನದಲ್ಲಿ ಮಹಿಳೆಗಾಗಿ ದುಡಿದ ಅವರ ಶ್ರಮದ ಒಂದು ಕಿರುಪರಿಚಯವಾಗಿದೆ

ಭಕ್ತಿ ಚಳುವಳಿಯ ಕಾಲದಿಂದಲೂ ಮಹಿಳೆ ಧಾರ್ಮಿಕ ಸಮಾನತೆ ಕೇಳಲು ಶಕ್ತಳಾಗಿದ್ದಳೇ ಹೊರತು ಸಾಮಾಜಿಕ ಸ್ಥಾನಮಾನಗಳಲ್ಲಿ ಯಾವ ಬದಲಾವಣೆಯೂ ತರಲು ಸಾಧ್ಯವಾಗಿರಲಿಲ್ಲ. ಬ್ರಿಟಿಷರ ಆಗಮನವಾದ ನಂತರ ಸಮಾಜ ಸುಧಾರಕರು ಸ್ತ್ರೀ ಶೋಷಣೆಯ ವಿರುದ್ಧ ಜನಜಾಗೃತಿಗಾಗಿ ಶ್ರಮಿಸಿದರು. ೧೮೪೮ರಲ್ಲಿ ಜ್ಯೋತಿಬಾ ಫುಲೆಯವರು ವಿದ್ಯೆಯಿಂದ ವಂಚಿತರಾಗಿದ್ದ ಅಸ್ಪೃಶ್ಯರಿಗೆ ಮತ್ತು ಹೆಣ್ಣುಮಕ್ಕಳಿಗೆ ಶಾಲೆ ಪ್ರಾರಂಭ ಮಾಡಿದರು. ಬಾಲ್ಯವಿವಾಹ, ವಿಧವಾ ಪದ್ಧತಿ, ಸತಿ ಪದ್ಧತಿ, ಶಿಕ್ಷಣ ಹಕ್ಕು ನಿರಾಕರಣೆ, ಆಸ್ತಿ ಹಕ್ಕು ನಿರಾಕರಣೆಯಂತಹ ವಿಷಯಗಳನ್ನು ಸಮಾಜ

ಸುಧಾರಕರು ಪರಿಗಣಿಸಿದರು. ಆದರೆ ಮಹಿಳಾ ಶೋಷಣೆಯ ವಿವಿಧ ಮಗ್ಗುಲುಗಳ ಬಗ್ಗೆ ಆಳವಾಗಿ ಚಿಂತಿಸಿ, ಧಾರ್ಮಿಕ-ಸಾಮಾಜಿಕ-ರಾಜಕೀಯ ಹಕ್ಕುಗಳನ್ನು ಸಂವಿಧಾನದತ್ತವಾಗಿ ನೀಡಲು ಶ್ರಮಿಸಿದ ಮೊದಲ ವ್ಯಕ್ತಿ ಅಂಬೇಡ್ಕರ್. 'ಯಾವುದೇ ಸಮುದಾಯದ ಏಳ್ಗೆಯನ್ನು ಅಳೆಯಬೇಕಾದರೆ ಆ ಸಮುದಾಯದ ಸ್ತ್ರೀಯರ ಏಳ್ಗೆಯನ್ನು ಪರಿಗಣಿಸಬೇಕು' ಎಂದು ಮಹಿಳೆಯರ ಸ್ಥಿತಿಗತಿಯನ್ನು ಸಮಾಜದ ಏಳ್ಗೆಯ ಸೂಚ್ಯಂಕವಾಗಿ ಪರಿಗಣಿಸಿದ ಅಂಬೇಡ್ಕರ್ ಭಾರತದಲ್ಲಿ ಮಾನವ ಹಕ್ಕು ಹಾಗೂ ಮಹಿಳಾ ಹಕ್ಕು ಹೋರಾಟಗಳಿಗೆ ಕಾನೂನಿನ ಚೌಕಟ್ಟು ನೀಡಿದ ಮೊದಲ ನಾಯಕರಾಗಿದ್ದಾರೆ.

ಅಲ್ಲದೆ ಅನೀತಿ, ಅನ್ಯಾಯ, ಅಜ್ಞಾನ, ಮೂಢನಂಬಿಕೆ ಇವುಗಳ ವಿರುದ್ಧ ಹೋರಾಟ ನಡೆಸುವವರಿಗೆ ಪ್ರೇರಕ ಶಕ್ತಿಯಾಗಿದ್ದಾರೆ, ಸ್ಫೂರ್ತಿಯಾಗಿದ್ದಾರೆ. ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಬೇರು ಬಿಟ್ಟಿದ್ದ, ಸಾಮಾಜಿಕ ಪಿಡುಗಿನ ವಿರುದ್ಧ ಜನರಲ್ಲಿ ಜಾಗೃತಿಯನ್ನು, ಕ್ರಾಂತಿಯ ಕಿಡಿಯನ್ನು ಹಾಗೂ ಆತ್ಮಾಭಿಮಾನವನ್ನು ಮೂಡಿಸಲು ತಮ್ಮ ಜೀವನವನ್ನೇ ಸವೆಸಿದ ಮಹಾ ಪುರುಷರಲ್ಲಿ ಅಂಬೇಡ್ಕರ್ ಅವರ ಹೆಸರು ಹಚ್ಚ ಹಸಿರಾಗಿ ಇಂದಿಗೂ ಉಳಿದಿದೆ. ಜಾತಿ-ಕುಲ, ಸ್ತ್ರೀ-ಪುರುಷ ಎಂಬ ಭೇದಭಾವವಿಲ್ಲದೆ ಭಾರತೀಯರೆಲ್ಲರಿಗೂ ಮೂಲಭೂತ ಹಕ್ಕುಗಳನ್ನು ಕೊಡಬೇಕು, ಮಹಿಳೆಯರಿಗೆ ತಂದೆಯ ಆಸ್ತಿಯಲ್ಲಿ ಸಮಪಾಲು ದೊರೆಯಬೇಕು ಎಂದು ಪ್ರಪ್ರಥಮವಾಗಿ ಘೋಷಿಸಿದ ಮೊಟ್ಟಮೊದಲ ಭಾರತದ ರಾಜಕೀಯ ನೇತಾರ ಇವರು. ಹೆಣ್ಣು ಮಕ್ಕಳಿಗೆ, ಗಂಡು ಮಕ್ಕಳಂತೆಯೇ ಆಸ್ತಿಯಲ್ಲಿ ಸಮಪಾಲು ನೀಡಬೇಕು. ಮಹಿಳೆಯರು ದೈಹಿಕವಾಗಿ ಮಾನಸಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕ ವಾಗಿ ಉದ್ಧಾರವಾಗಿ, ಸಮಾಜದಲ್ಲಿ ತಲೆ ಎತ್ತಿ ನಡೆಯುವಂತೆ ಮಾಡಬೇಕೆಂದು ಕನಸುಕಂಡವರಲ್ಲಿ ಬಾಬಾ ಸಾಹೇಬರು ಮೊದಲಿಗರು.

'ಹೆಣ್ಣು ಹಿಂದೂ ಸಮಾಜದ ಅತ್ಯಂತ ಶೋಷಿತಳು. ದಲಿತರು ಮತ್ತು ಮಹಿಳೆಯರ ಸ್ಥಿತಿಗತಿ ಒಂದೇ. ಭಾರತೀಯ ಸಮಾಜ ಒಂದು ಕೈಯಲ್ಲಿ ಅವಳನ್ನು ಪೂಜಿಸುತ್ತ, ಮತ್ತೊಂದು ಕೈಯಲ್ಲಿ ಬೆತ್ತ ಹಿಡಿದು ಲಕ್ಷ್ಮಣರೇಖೆಗಳನ್ನು ದಾಟದಂತೆ ನಿರ್ಬಂಧ ವಿಧಿಸಿದೆ' ಎಂಬುದನ್ನು ಅಂಬೇಡ್ಕರ್ ಅರಿತಿದ್ದರು. ವಿದೇಶೀ ವಿದ್ಯಾಭ್ಯಾಸ, ಅದರಲ್ಲೂ ಜರ್ಮನಿಯ ಬಾನ್‌ನಲ್ಲಿ ಕಳೆದ ದಿನಗಳು ಪಾಶ್ಚಾತ್ಯ ಸ್ತ್ರೀವಾದಿ ಚಿಂತನೆಗೆ ಅವರನ್ನು ಹತ್ತಿರ ತಂದವು. ಮೊದಲ ಅಲೆಯ ಮಹಿಳಾ ಚಳುವಳಿಯ ಪ್ರತಿಫಲವಾಗಿ ೧೯೧೮ರ ಹೊತ್ತಿಗೆ ಬ್ರಿಟನ್ ಹಾಗೂ ೧೯೨೦ರ ವೇಳೆಗೆ ಅಮೆರಿಕಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ಕೊಡಲಾಯಿತು. ಸಮಾನ ವೇತನ, ಮಹಿಳೆಯರಿಗೆ ಸಮಾನ ಆಸ್ತಿ ಹಕ್ಕು ಮೊದಲಾದವು ಅಲ್ಲಿ ಬಹುಚರ್ಚಿತ ವಿಷಯಗಳಾಗಿದ್ದವು. ಸಹಜವಾಗಿಯೇ ಮುಕ್ತ ಚಿಂತನೆಯ ಅಂಬೇಡ್ಕರ್‌ರನ್ನು

ಮಹಿಳಾಪರ ಚಿಂತನೆಗಳು ಸೆಳೆದವು. ರಾಜಕೀಯ ಅಧಿಕಾರ ಸಿಗದೇ ಯಾವುದೂ ಬದಲಾಗುವುದು ಅಷ್ಟು ಸುಲಭವಲ್ಲ ಎಂಬುದನ್ನವರು ಗುರುತಿಸಿದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದುವಾಗ ತಮ್ಮ ಗೆಳೆಯನಿಗೆ ಬರೆದ ಪತ್ರವೊಂದರಲ್ಲಿ ಹಿಂದುಳಿದ ವರ್ಗಗಳ ವಿದ್ಯಾಭ್ಯಾಸ, ಅದರಲ್ಲೂ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಬಹುಮುಖ್ಯವೆಂದು, 'ಸದ್ಯದಲ್ಲಿಯೇ ಒಳ್ಳೆಯ ದಿನಗಳನ್ನು ಕಾಣುತ್ತೇವೆ. ಆದರೆ ಅದಕ್ಕಾಗಿ ಪುರುಷರ ಜೊತೆಗೆ ಮಹಿಳೆಯರೂ ಒಟ್ಟೊಟ್ಟಿಗೇ ಶಿಕ್ಷಣ ಪಡೆಯುವುದು ಅವಶ್ಯವಿದೆ' ಎಂದೂ ಹೇಳಿದ್ದರು.

ಅವರು ಹೊರತರುತ್ತಿದ್ದ 'ಮೂಕನಾಯಕ' ಹಾಗೂ 'ಬಹಿಷ್ಕೃತ ಭಾರತ' ಪತ್ರಿಕೆಗಳಲ್ಲಿ ಮಹಿಳಾ ಸಮಸ್ಯೆ ಮುಖ್ಯವಾಗಿ ಚರ್ಚಿತವಾಗುತ್ತಿತ್ತು. ಮಹಾಡ್ ಸತ್ಯಾಗ್ರಹ ಮೆರವಣಿಗೆಯಲ್ಲಿ ೫೦೦ ಸ್ತ್ರೀಯರು ಪಾಲ್ಗೊಂಡಿದ್ದರು. ಕಾಳಾರಾಮ್ ದೇವಾಲಯ ಪ್ರವೇಶ ಸಂದರ್ಭದಲ್ಲಿ ಕೂಡಾ ಮಹಿಳೆಯರಿದ್ದರು ೧೯೨೭ರಲ್ಲಿ ಡಿಪ್ರೆಸ್ಡ್ ಕ್ಲಾಸ್ ವಿಮೆನ್ಸ್ ಅಸೋಸಿಯೇಷನ್ ಶುರುವಾಯಿತು. ಅದರ ಸಮಾವೇಶದಲ್ಲಿ ೩೦೦೦ ಹಿಂದುಳಿದ ಮಹಿಳೆಯರನ್ನುದ್ದೇಶಿಸಿ ಮಾತನಾಡುತ್ತಾ, 'ನಿಮ್ಮ ಬಟ್ಟೆ ತೇಪೆಯಿಂದ ಕೂಡಿದ್ದರೇನಾಯಿತು? ಸ್ವಚ್ಛವಾಗಿರಿ. ನಿಮ್ಮನ್ನು ನೀವೇ ಮುಟ್ಟಿಸಿಕೊಳ್ಳದವರೆಂದು ಭಾವಿಸಬೇಡಿ. ನಿಮ್ಮ ಮಕ್ಕಳನ್ನು ಅದರಲ್ಲೂ ಹೆಣ್ಣುಮಕ್ಕಳನ್ನು ಶಾಲೆಗೆ ಕಳಿಸಿ. ಮಕ್ಕಳ ಮನಸ್ಸಿನ ಕೀಳರಿಮೆ ತೆಗೆದು ಅವರಲ್ಲಿ ಆತ್ಮಗೌರವ ತುಂಬಿ. ಮಹಾನ್ ವ್ಯಕ್ತಿಗಳಾಗಲು ಹುಟ್ಟಿದ್ದಾರೆಂದು ಅವರನ್ನು ನಂಬಿಸಿ' ಎಂದು ಕಿವಿಮಾತು ಹೇಳಿದ್ದರು.

ಅಂಬೇಡ್ಕರ್‌ರ ತಾತ್ವಿಕ ಬೆಂಬಲ ಹಾಗೂ ಸಂಘಟನೆಗಳ ಬಲದೊಂದಿಗೆ ಮಹಿಳಾ ಜಾಗೃತಿಯ ಹೊಸ ಅಧ್ಯಾಯವೇ ಶುರುವಾಯಿತು. ೧೯೨೮ರಲ್ಲಿ ಹಿಂದುಳಿದ ಮಹಿಳೆಯರ ಸಂಘಟನೆ ಆರಂಭವಾಯಿತು. ಅನೇಕ ಕಡೆಗಳಲ್ಲಿ ದಲಿತ ಮಹಿಳಾ ಸಮಾವೇಶಗಳು ಜರುಗಿದವು. ತುಳಸೀಬಾಯಿ ಬಣಸೋಡೆ 'ಚೊಕ್ಕಮೇಲ' ಎಂಬ ಪತ್ರಿಕೆ ಶುರುಮಾಡಿದರು. ಮಹಿಳಾ ಹಾಸ್ಟೆಲ್ಲುಗಳು, ಶಾಲೆಗಳನ್ನು ತೆರೆಯಲಾಯಿತು. ಹೆಣ್ಣುಮಕ್ಕಳು ಆತ್ಮಕತೆ, ನಾಟಕಗಳನ್ನು ಬರೆದರು. ಧರ್ಮಪ್ರಸಾರಕರಾದರು. ೧೯೩೧ರಲ್ಲಿ ರಾಧಾಬಾಯಿ ವಢಾಳೆ ಎಂಬಾಕೆ, 'ಹಿಂದೂ ದೇವಸ್ಥಾನ ಪ್ರವೇಶಿಸಲು ಹಾಗೂ ಕುಡಿಯುವ ನೀರಿಗಾಗಿ ಸಾರ್ವಜನಿಕ ಜಲಮೂಲಗಳಿಗೆ ಹೋಗಲು ನಮಗೆ ಹಕ್ಕು ಬೇಕು. ಅಷ್ಟೇ ಅಲ್ಲ ವೈಸರಾಯ್ ಅವರೇ, ಸಾಮಾಜಿಕ ಹಕ್ಕುಗಳ ಜೊತೆ ನಮಗೆ ರಾಜಕೀಯ ಹಕ್ಕುಗಳೂ ಬೇಕು. ಕಠಿಣ ಶಿಕ್ಷೆಗೆಲ್ಲ ನಾವು ಹೆದರುವವರಲ್ಲ. ದೇಶದ ಎಲ್ಲ ಜೈಲುಗಳನ್ನೂ ಬೇಕಾದರೆ ತುಂಬಲು ಸಿದ್ಧರಿದ್ದೇವೆ. ಅವಮಾನಕರವಾಗಿ ಬದುಕುವುದಕ್ಕಿಂತ ನೂರು ಸಲವಾದರೂ ಹೋರಾಡಿ ಸಾಯಲು ನಾವು ಸಿದ್ಧರಿದ್ದೇವೆ' ಎಂದು ಹೇಳಿದಳು.

ಇಂಥ ಸಂದರ್ಭದಲ್ಲಿ ಮಹಿಳೆಯರು ಎದುರಿಸುವ ಜೈವಿಕ, ದೈಹಿಕ ಕಷ್ಟಗಳ ಕುರಿತು; ನಿಭಾಯಿಸಬೇಕಾದ ವಿಶೇಷ ಜವಾಬ್ದಾರಿಯ ಕುರಿತು ಅಂಬೇಡ್ಕರ್ ಮಾತನಾಡಿದರು. ೧೯೩೮ರಷ್ಟು ಹಿಂದೆಯೇ ಕುಟುಂಬ ಯೋಜನಾ ವಿಧಾನವನ್ನು ಸರ್ಕಾರ ಜನಪ್ರಿಯಗೊಳಿಸಬೇಕೆಂದು ಮುಂಬಯಿಯ ಶಾಸನಸಭೆಯಲ್ಲಿ ವಾದಿಸಿದರು. ಹೆತ್ತುಹೆತ್ತು ಮಕ್ಕಳನ್ನು ಸಾಕುವುದರಲ್ಲೇ ಹೆಣ್ಣುಮಕ್ಕಳು ಎಣಗುತ್ತಿದ್ದಾರೆ, ಅವರ ಶಕ್ತಿಸಾಮರ್ಥ್ಯವನ್ನು ಸಮಾಜ ಉಪಯೋಗಿಸಿಕೊಳ್ಳಬೇಕೆಂದರೆ ಕುಟುಂಬ ಯೋಜನೆ ಅವಶ್ಯವೆಂದೂ ಪ್ರತಿಪಾದಿಸಿದರು. ೧೯೪೨ರಲ್ಲಿ ದೆಹಲಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದಾಗ ಹೆರಿಗೆ ಭತ್ಯೆ ನೀಡುವ ಬಗ್ಗೆ ಪ್ರಸ್ತಾಪಿಸಿದರು. ವೇತನ ಸಹಿತ ಹೆರಿಗೆ ಭತ್ಯೆ ರಜೆ ನೀಡುವುದು ಸರ್ಕಾರಕ್ಕೆ ಆರ್ಥಿಕ ಹೊರೆಯೆನಿಸಿದರೂ ಸಹ ಮನುಷ್ಯ ಸಮಾಜದ ನಾಳಿನ ಸಂತತಿಯನ್ನು ಹೆತ್ತು ಸಾಕುವ ಹೆಣ್ಣುಮಕ್ಕಳನ್ನು ಅಷ್ಟಾದರೂ ಗೌರವಿಸುವುದು, ಅವರಿಗೆ ಅವಶ್ಯವಿರುವಷ್ಟು ವಿರಾಮ ನೀಡುವುದು ಉಳಿದ ಸಮಾಜದ ಕರ್ತವ್ಯ ಎಂದೂ, ಅದಕ್ಕೆ ಸರ್ಕಾರ ಸಿದ್ಧತೆ ಮಾಡಿಕೊಳ್ಳಬೇಕೆಂದೂ ಸೂಚಿಸಿದರು. ಇದು ಅವರಿಗೆ ಒಂದು ರೀತಿಯ ಆತ್ಮಸ್ಥೈರ್ಯವನ್ನುಂಟುಮಾಡಿದವು.

**ಅಂಬೇಡ್ಕರ್ ಅವರ ಮಹಿಳಾಪರ ಹೋರಾಟ ಮತ್ತು ಸಾಧನೆ:**

ಅಂಬೇಡ್ಕರ್‌ರವರು ಒಂದು ಸಭೆಯಲ್ಲಿ ಹೆಣ್ಣು ಮಕ್ಕಳನ್ನು ಕುರಿತು ಮಾತನಾಡುವಾಗ, 'ಮದುವೆಗೆ ಅವಸರಪಡಬೇಡಿ. ಮದುವೆ ಒಂದು ಬಂಧನ. ಮದುವೆಯ ನಂತರದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸುವಷ್ಟು ಶಕ್ತಿಶಾಲಿಯಲ್ಲದಿದ್ದರೆ ಮದುವೆಯಾಗಬೇಡಿ. ಮದುವೆಯಾದ ಹೆಣ್ಣು ಗಂಡನ ಪಕ್ಕ ಸರಿಸಮಾನಳಾಗಿ ನಿಲ್ಲಬೇಕು, ದಾಸಿಯಂತಲ್ಲ. ಮದುವೆಯಾದವರು ನೆನಪಿಡಿ: ತುಂಬ ಮಕ್ಕಳನ್ನು ಹೆರುವುದು ಅಪರಾಧ. ಏಕೆಂದರೆ ನಮ್ಮ ಪಾಲಕರು ನೀಡಿದ್ದಕ್ಕಿಂತ ಹೆಚ್ಚಿನದನ್ನು ನಾವು ನಮ್ಮ ಮಕ್ಕಳಿಗೆ ನೀಡಲು ಶಕ್ತರಾಗಿರಬೇಕು' ಎಂದು ಹೇಳಿದರು. ಇಂಥ ತಾಯ್ತನದ ಅಂತಃಕರಣದ ಮಾತುಗಳ ಕಾರಣವಾಗಿಯೇ ಅಂಬೇಡ್ಕರ್‌ರವರು ಎಲ್ಲಾ ಹೆಣ್ಣು ಮಕ್ಕಳ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿದ್ದಾರೆ. ಇವೇ ಅಲ್ಲದೆ ಮಹಿಳೆಯರ ಉದ್ಧಾರಕ್ಕಾಗಿ ಹಲವಾರು ಅನುಚ್ಛೇದಗಳನ್ನು ಸೇರಿಸಿ ಸಂವಿಧಾನಬದ್ಧವಾಗಿ ಮಹಿಳೆಗೆ ಸಿಗಬೇಕಾದ ಮಾನ್ಯತೆ ಸಿಗುವಂತೆ ನೋಡಿಕೊಂಡರು. ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲು ಒದ್ದಾಡುತ್ತಿರುವ ಇಂದಿನ ಸರ್ಕಾರಗಳು ಡಾಕ್ಟರ್ ಅಂಬೇಡ್ಕರ್‌ರಿಂದ ಪಾಠ ಕಲಿಯಬೇಕು. ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಕಾಣೆಯಾಗಿರುವುದನ್ನು ನೋಡಿದರೆ ನಮ್ಮ ಪುರುಷ ರಾಜಕಾರಣಿಗಳು ಈಗಲೂ ಮಹಿಳೆಯರನ್ನು ತಮ್ಮ ಸಮಾನಳೆಂದು ಒಪ್ಪಿಕೊಂಡಿಲ್ಲ. ಡಾಕ್ಟರ್ ಅಂಬೇಡ್ಕರ್ ಅವರು ಸಂವಿಧಾನ ದಲ್ಲಿ ಸಾರಿದ್ದು ಈಗಲೂ ಮಹಿಳೆಯರಿಗೆ ಅರ್ಥವಾಗದೆ ಇರುವುದು ದುರಂತ.

ಮಹಿಳೆಯ ಮೂಲಭೂತ ಹಕ್ಕುಗಳನ್ನು ಹಾಗೂ ಸಮಾನ ಬದುಕನ್ನು ಕಾನೂನುಬದ್ಧವಾಗಿ ನೀಡಲು ಸರ್ವ ಪ್ರಯತ್ನ ಮಾಡಿದ ಮಾನವತಾವಾದಿ, ತಮ್ಮ ಜೀವನ ಪರ್ಯಂತ ಮಾನವ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಎಲ್ಲ ವರ್ಗಗಳಿಂದ ತುಳಿತಕ್ಕೊಳಗಾದ ಮಹಿಳೆಯರ ಉದ್ಧಾರದ ಬಗ್ಗೆ ಅವರು ಮುಕ್ತಮನಸ್ಸು ಹೊಂದಿದ್ದರು. ಅದಕ್ಕಾಗಿ ಶತಶತಮಾನಗಳಿಂದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ಸ್ವತಂತ್ರ ಸಹಜ ಬದುಕಿಗೆ ತರಲು, ಮಹಿಳೆ ಪುರುಷನಿಗಿಂತ ಕಡಿಮೆಯೇನೂ ಇಲ್ಲ ಪುರುಷರಷ್ಟೇ ಸಬಲರು, ಬುದ್ಧಿವಂತರು ಆಗಿದ್ದಾರೆ ಎಂದು ಸಾರಿದರು. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಹಲವಾರು ಅವಕಾಶಗಳನ್ನು ಕಲ್ಪಿಸಿ ಕೊಡುವುದಕ್ಕಾಗಿ ಹಗಲಿರುಳು ಶ್ರಮಿಸಿದರು. ಪ್ರಾಮಾಣಿಕ ಪ್ರಯತ್ನದಿಂದ ಭಾರತೀಯ ಮಹಿಳೆಗೆ ಸಂವಿಧಾನಬದ್ಧವಾಗಿ ಅನೇಕ ಅಧಿಕಾರಗಳನ್ನು ಅನುಚ್ಛೇದಗಳ ಮೂಲಕ ದೊಕಿಸಿಕೊಟ್ಟಿದ್ದಾರೆ.

ಅನುಚ್ಛೇದ 14: ಸ್ತ್ರೀ–ಪುರುಷ ಕುಲ ಜಾತಿ ಭೇದ ಭಾವ ಮಾಡದೆ ಭಾರತದಲ್ಲಿ ವಾಸಿಸುವ ಎಲ್ಲಾ ಪ್ರಜೆಗಳು ಕಾನೂನಿನ ಮುಂದೆ ಸಮಾನರು.

ಅನುಚ್ಛೇದ 15: ಜಾತಿ, ಮತ, ಲಿಂಗ ಮತ್ತು ಹುಟ್ಟಿನ ಆಧಾರದ ಮೇಲೆ ಯಾವುದೇ ರೀತಿಯ ತಾರತಮ್ಯ ಮಾಡತಕ್ಕದ್ದಲ್ಲ.

ಅನುಚ್ಛೇದ 39: ಸ್ತ್ರೀ ಪುರುಷರಿಗೆ ಸರಿಸಮಾನವಾಗಿ ಜೀವನವನ್ನು ಒದಗಿಸತಕ್ಕದ್ದು ಪುರುಷ ಸ್ತ್ರೀ ಸೇವೆಗೆ ಸಮಾನ ವೇತನ ನೀಡಬೇಕು.

ಅನುಚ್ಛೇದ 42: ಉದ್ಯೋಗಸ್ಥ ಮಹಿಳೆಯರಿಗೆ ಹೆರಿಗೆ ಸಂದರ್ಭದಲ್ಲಿ ವೇತನ ಸಹಿತ ರಜೆ ಹಾಗೂ ಇನ್ನಿತರ ಸೌಲಭ್ಯ ಒದಗಿಸುವುದು. ಸರ್ಕಾರದ ಕರ್ತವ್ಯವಾಗಿದೆ.

ಡಾಕ್ಟರ್ ಅಂಬೇಡ್ಕರ್ ಅಸ್ಪೃಶ್ಯತೆ ನಿವಾರಣೆಯಷ್ಟೆ ಮಹತ್ವವನ್ನು ಮಹಿಳೆಯರ ಅಭಿವೃದ್ಧಿಗಾಗಿಯೂ ಸಹ ಕೊಟ್ಟಿದ್ದರು.

ಅವರ ಸುಧಾರಣೆಯಲ್ಲಿ ಅವರು ಮಾಡಿದ ಮತ್ತೊಂದು ಸಾಧನೆಯೆಂದರೆ ಮಹಿಳಾಪರ ನಾಲ್ಕು ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಿ

ಅವು ಸ್ವೀಕೃತವಾಗಿದ್ದು, ಮಹಿಳಾ ಸ್ವಾತಂತ್ರಕ್ಕೆ ಸಂಬಂಧಪಟ್ಟ ಪ್ರಮುಖ ಕಾಯ್ದೆಗಳು

1. ಹಿಂದೂ ವಿವಾಹ ಕಾಯ್ದೆ 1955.
2. ಹಿಂದೂ ಉತ್ತರಾಧಿಕಾರ ಕಾನೂನು 1956. ಮತ್ತು ಈ ಕಾಯ್ದೆ ಪ್ರಕಾರ ದತ್ತುಸ್ವೀಕಾರ ಸಂಬಂಧದಲ್ಲಿ ಹೆಣ್ಣು ಮತ್ತು ಗಂಡಿನ ನಡುವೆ ಯಾವುದೇ

ತಾರತಮ್ಯ ಇರುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಮೊದಲು ಹೆಣ್ಣುಮಕ್ಕಳಿಗೆ ಅವಕಾಶ ಇರಲಿಲ್ಲ.

3. ಪೋಷಕತ್ವ ಕಾನೂನು 1956 ಇವರಿಗೆ ಸಲ್ಲುತ್ತದೆ.
4. 1956 ಹಿಂದೂ ದತ್ತಕ ಕಾಯ್ದೆ ಗಂಡುಮಗನಷ್ಟೆ ಹೆಣ್ಣು ಮಗುವನ್ನು ದತ್ತು ಸ್ವೀಕರಿಸುವ ಆಕಾಶವನ್ನು ನೀಡಲಾಯಿತು. ಅಲ್ಲದೆ ಗಂಡ–ಹೆಂಡತಿಯರಿಬ್ಬರೂ ದತ್ತು ಸ್ವೀಕರಿಸುವ ಸಂಬಂಧದಲ್ಲಿ ಪರಸ್ಪರ ಒಪ್ಪಿಕೊಳ್ಳಬೇಕು.

ಹೀಗೆ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ಹಾಗೂ ಕಾನೂನುಬದ್ಧವಾಗಿ ಮಹಿಳೆಯರಿಗೆ ಸಮಾನತೆ ಹಾಗೂ ಸ್ವಾತಂತ್ರ್ಯವನ್ನು ನೀಡುವುದರ ಮೂಲಕ ಶತಶತಮಾನಗಳಿಂದ ಶೋಷಣೆಗೊಳಗಾಗುತ್ತಾ ಬಂದಿದ್ದ ಮಹಿಳೆಯರಿಗೆ ಹೊಸ ಜೀವನ ನೀಡಿದರು. ಹೊಸ ಸ್ಫೂರ್ತಿ ತುಂಬಿದರು. ಅವರ ಪರಿಶ್ರಮದಿಂದ ಭಾರತೀಯ ಮಹಿಳೆ ಸಂವಿಧಾನದ ಅವಕಾಶಗಳು ಹಕ್ಕುಗಳು ದೊರೆತಿರುವುದರಿಂದ ಮಹಿಳೆ ಇಷ್ಟೊಂದು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಸಮಾಜ ಸುಧಾರಕರು, ಮಾನವೀಯ ಹಕ್ಕುಗಳ ದಿಟ್ಟ ಪ್ರತಿಪಾದಕರು ಆದ ಇವರು ಅವರು ದೇಶಕ್ಕೆ ಅತ್ಯುತ್ತಮ ಸಂವಿಧಾನವನ್ನು ನೀಡಿರುವುದಲ್ಲದೆ, ತನ್ಮೂಲಕ ರಾಷ್ಟ್ರದ ಅಖಂಡತೆಯನ್ನು ಎತ್ತಿ ಹಿಡಿದು ಮಹಿಳೆಯನ್ನು ಸಮಾನ ಸ್ಥಾನದಲ್ಲಿ ಪ್ರತಿಷ್ಠಾಪಿಸುವ ಮೂಲಕ ಈ ನೆಲಕ್ಕೆ ಸಮಾನತೆಯ ಹರಿಕಾರರಾಗಿ ನಿಂತಿದ್ದಾರೆ.

**ಹಿಂದೂ ಕೋಡ್ ಬಿಲ್ ಮತ್ತು ಮಹಿಳೆ:**

ಯಾವುದೇ ಸಾಮಾಜಿಕ ಬದಲಾವಣೆ ಬಯಸುವುದಾದರೂ ಅದಕ್ಕೆ ಪೂರಕವಾಗಿ ಕಾನೂನು ಚೌಕಟ್ಟು ಒದಗಿಸಬೇಕು ಎನ್ನುವುದು ಅಂಬೇಡ್ಕರ್ ನಿಲುವು. ಮಹಿಳಾ ಹಕ್ಕುಗಳ ಪರವಾಗಿ ಖಚಿತ ನಿಲುವು ಹೊಂದಿದ್ದ ಅಂಬೇಡ್ಕರ್‌ರ ಸಂವಿಧಾನವು ಮಹಿಳೆಯರಿಗೆ ಪುರುಷರಿಗಿರುವ ಎಲ್ಲ ಸವಲತ್ತುಗಳನ್ನೂ ನೀಡಿತು. ಜೊತೆಗೆ ೧೫(೩), ೫೧(ಎ) ಕಲಮುಗಳು ವಿಶೇಷ ಸವಲತ್ತುಗಳನ್ನು ನೀಡಲು ಅವಕಾಶ ಕಲ್ಪಿಸಿದವು. ಅದಕ್ಕೆ ಪೂರಕವಾಗಿ ಅಂಬೇಡ್ಕರ್ ಬಹಳ ಪ್ರಯತ್ನಪಟ್ಟು ತರಲೆತ್ನಿಸಿದ್ದು ಹಿಂದೂ ಕೋಡ್ ಬಿಲ್ ನಲ್ಲಿ

ಭಾರತೀಯ ಹಿಂದೂ ವಿವಾಹಪದ್ಧತಿಯಲ್ಲಿ ಮಹಿಳೆಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡಿರಲಿಲ್ಲ. ಅದು ಮಹಿಳೆಗೆ ದಾಸ್ಯ ಹೇರುವುದಲ್ಲದೇ ವಿಚ್ಛೇದನಕ್ಕೆ ಅವಕಾಶವನ್ನು ನಿರಾಕರಿಸಿ, ಪುರುಷರ ಬಹುಪತ್ನಿತ್ವವನ್ನು ಮಾನ್ಯ ಮಾಡುತ್ತದೆ. ಹಿಂದೂ ವೈಯಕ್ತಿಕ ಕಾನೂನಿಗೆ ಏಕರೂಪ ಸಂಹಿತೆಯೊಂದನ್ನು ತರಬೇಕೆಂಬುದು ಬ್ರಿಟಿಷ್ ಆಡಳಿತ ಕಾಲದಿಂದಲೂ ನಡೆದ ಪ್ರಯತ್ನವಾಗಿತ್ತು. ೧೯೪೪ರಲ್ಲಿ ತಯಾರಾದ

ಹಿಂದೂ ಕೋಡ್ ಬಿಲ್ ಹಲವು ವಿರೋಧಗಳ ನಡುವೆ ಮೂಲೆಗುಂಪಾಗಿತ್ತು. ನೆಹರೂ ಮೊದಲಿನಿಂದಲೂ ಹಿಂದೂ ವೈಯುಕ್ತಿಕ ಕಾನೂನು ಸುಧಾರಣೆ ತನ್ನ ಪ್ರಥಮ ಆದ್ಯತೆ ಎಂದೇ ಹೇಳುತ್ತಿದ್ದರು. ಸ್ವಾತಂತ್ರ್ಯಾನಂತರ ೧೯೪೭ರ ಹಿಂದೂ ಕೋಡ್ ಬಿಲ್ ಅನ್ನು ಪರಿಷ್ಕರಣೆಗಾಗಿ ಕಾನೂನು ವಿಭಾಗಕ್ಕೆ ಕಳಿಸಿದರು. ಆಗ ಕಾನೂನು ಮಂತ್ರಿಯಾಗಿದ್ದ ಅಂಬೇಡ್ಕರ್ ಪರಿಷ್ಕರಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಹಿಂದೂ ಸಾಮಾಜಿಕ ಬದುಕಿನಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಅಂಬೇಡ್ಕರ್ ಪರಿಷ್ಕೃತ ಹಿಂದೂ ಕೋಡ್ ಬಿಲ್ ಅನ್ನು ಮಂಡಿಸಿದರು. ಅದರಲ್ಲಿ ಮೂರು ಮುಖ್ಯ ಬದಲಾವಣೆಗಳು ಪ್ರಸ್ತಾಪಿಸಲ್ಪಟ್ಟಿದ್ದವು:

- ಹಿಂದೂಗಳಲ್ಲಿ ಪ್ರಚಲಿತವಿದ್ದ ಹಲವು ತೆರನ ಮದುವೆ ಪದ್ಧತಿಗಳನ್ನು ರದ್ದುಗೊಳಿಸಿ ಒಂದೇ ವಿಧದ ಮದುವೆಯನ್ನು ಊರ್ಜಿತಗೊಳಿಸುವುದು.
- ಮಹಿಳೆಗೆ ಆಸ್ತಿ ಹಕ್ಕು ಮತ್ತು ದತ್ತು ತೆಗೆದುಕೊಳ್ಳುವ ಹಕ್ಕು ಕೊಡುವುದು.
- ಮಹಿಳೆಗೆ ವಿಚ್ಛೇದನದ ಹಕ್ಕು ನೀಡುವುದು.

ಈ ಮಸೂದೆಯು ಎಂಟು ಭಾಗಗಳನ್ನೊಳಗೊಂಡಿತ್ತು. ಹಿಂದೂವಾದವರು ಮದುವೆ/ದತ್ತು ಸ್ವೀಕಾರ/ ಪೋಷಕತ್ವ/ ಅವಿಭಕ್ತ ಕುಟುಂಬದ ಆಸ್ತಿ ಹಕ್ಕು/ ಹೆಣ್ಣುಮಕ್ಕಳ ಆಸ್ತಿ ಹಕ್ಕು/ವಾರಸುದಾರಿಕೆ ಹಾಗೂ ಜೀವನಾಂಶಗಳ ಕುರಿತ ಕಾನೂನುಗಳನ್ನು ಅದರಲ್ಲಿ ರೂಪಿಸಲಾಗಿತ್ತು. ಈ ಪರಿಷ್ಕರಿತ ಆವೃತ್ತಿಯಲ್ಲಿ ಮಹಿಳೆಗೆ ವಿಚ್ಛೇದನಕ್ಕೆ ಅವಕಾಶವಿತ್ತು. ವಿಧವೆಗೆ ಗಂಡನ ಆಸ್ತಿಯ ಪೂರಾ ಹಕ್ಕು ಹಾಗೂ ಮದುವೆಯಾದ ಹೆಣ್ಣುಮಕ್ಕಳಿಗೆ ತವರಿನ ಆಸ್ತಿ ಹಕ್ಕುಗಳು ಪ್ರಸ್ತಾಪಿಸಲ್ಪಟ್ಟಿದ್ದವು. ಅಲ್ಲದೇ ಯಾರು ಹಿಂದೂ ಎಂದು ವಿವರಿಸುವಾಗ ಎಲ್ಲ ಜಾತಿಗಳೂ ಏಕರೂಪ ಸಂಹಿತೆಗೆ ಒಳಪಡುತ್ತಿದ್ದುದರಿಂದ ಅದು ಜಾತಿವ್ಯವಸ್ಥೆಯನ್ನು ಭಗ್ನಗೊಳಿಸುವಂತಿತ್ತು.

ಹೀಗೆ ಪುರುಷ ಪ್ರಧಾನ ಸಮಾಜಕ್ಕೂ, ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಗೂ ಬದಲಾವಣೆ ತರಬಯಸಿದ್ದ ಹಿಂದೂ ಕೋಡ್ ಬಿಲ್ ಮಹಿಳಾ ಸಮಾನತೆ ಮತ್ತು ಹಕ್ಕುಗಳನ್ನು ಎತ್ತಿ ಹಿಡಿಯುವಂತಿತ್ತು. ಆದರೆ ಅದು ಮೂರ್‌ನಾಲ್ಕು ವರ್ಷ ಸಂಸತ್ತಿನಲ್ಲಿ ಚರ್ಚೆಗೊಳಗಾಯಿತು. ಕಾಂಗ್ರೆಸ್ಸಿನ ಕೆಲವು ಧುರೀಣರೇ ಅದನ್ನು ವಿರೋಧಿಸಿದರು. ನೆಹರೂ ಅದನ್ನು ಚರ್ಚೆಗಾದರೂ ಒಳಪಡಿಸಬೇಕೆಂದು ಪ್ರಯತ್ನಿಸಿದರು. ಆದರೆ ಅದೂ ಸಾಧ್ಯವಾಗದೇ ಕೊನೆಗೆ ಮತಕ್ಕೆ ಹಾಕಿದಾಗ ೨೮/೨೩ ಮತಗಳ ಅಂತರದಲ್ಲಿ ತಿರಸ್ಕೃತವಾಯಿತು. ಇದರಿಂದ ಅತೀವ ನೊಂದ ಅಂಬೇಡ್ಕರ್ 'ಅಳುವವರಿಲ್ಲದೇ ಶೋಕಿಸುವವರಿಲ್ಲದೇ ಹಿಂದೂ ಕೋಡ್ ಬಿಲ್ ಕೊಲೆಯಾಯಿತು' ಎಂದೇ ಪ್ರತಿಕ್ರಿಯಿಸಿ ಕಾನೂನು ಮಂತ್ರಿ ಪದವಿಗೆ ರಾಜೀನಾಮೆ ನೀಡಿದರು. ಇಲ್ಲಿಗೆ ನಿಲ್ಲದೆ ಸಮುದಾಯದ ಪ್ರತಿನಿಧಿಯಾಗಿ ಅಂಬೇಡ್ಕರ್ ಜನಸಂಪರ್ಕದ ಧಾವಂತವನ್ನು

ಅರ್ಥಮಾಡಿಕೊಂಡ ಅವರು ತಮ್ಮ ಆರೋಗ್ಯ, ವೈಯಕ್ತಿಕ ಸುಖಗಳನ್ನು ಗಮನಿಸದೆ ಸತತ ಸಂಘಟನೆ-ಹೋರಾಟ-ಅಧ್ಯಯನ-ಬರೆವಣಿಗೆಯಲ್ಲಿ ತೊಡಗಿದ ಅವರು ತಮ್ಮ ಜೀವಮಾನದುದ್ದಕ್ಕೂ ಯಾವ ಆಮಿಷಗಳಿಗೆ ಬಲಿಯಾಗದೆ ನೈತಿಕತೆ, ನಿಷ್ಠುರತೆಯನ್ನು ಹೋರಾಡಿದರು. ವ್ಯಕ್ತಿಪೂಜೆಯನ್ನು ಅವರು ಒಪ್ಪುತ್ತಿರಲಿಲ್ಲ. ತಮ್ಮ ಬರಹ-ಭಾಷಣಗಳಲ್ಲಿ ಯಾವುದೇ ವ್ಯಕ್ತಿ-ಸಿದ್ಧಾಂತವನ್ನು ಪ್ರಶ್ನಿಸದೆ ಇರುತ್ತಿರಲಿಲ್ಲ. ಜೊತೆಗೆ ಅಂಬೇಡ್ಕರ್‌ರದು ಆತ್ಮಮರುಕದ ಛಾಯೆಯಿಲ್ಲದ ಚಿಂತನೆ. ಕೌಟುಂಬಿಕ, ಆರ್ಥಿಕ ಸಂಕಷ್ಟದಲ್ಲಿದ್ದಾಗಲೂ, ಒಂಟಿಯಿರುವಾಗಲೂ ಅವರ ವ್ಯಕ್ತಿತ್ವದಲ್ಲಿ ಆತ್ಮಮರುಕದ ಛಾಯೆ ಸುಳಿಯಲಿಲ್ಲ. ಅತಿಭಾವುಕರೆನಿಸಿಕೊಂಡ, ಆ ಕಾರಣಕ್ಕೇ 'ಸೋಲುವ' ಹೆಣ್ಣುಮಕ್ಕಳು ಈ ಗುಣಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಅಲ್ಲದೆ ಇವು ಪ್ರಶ್ನಿಸದೇ ಏನನ್ನೂ ಒಪ್ಪಿಕೊಳ್ಳದ ವೈಜ್ಞಾನಿಕ ಮನೋಭಾವವನ್ನೂ, ದೂರದೃಷ್ಟಿಯನ್ನೂ, ಮುಕ್ತಮನಸ್ಥಿತಿಯನ್ನೂ ಬೆಳೆಸುತ್ತವೆ. ಎಂದಿದ್ದಾರೆ.

**ಭಾರತೀಯ ಮಹಿಳಾವಾದ ಮತ್ತು ಅಂಬೇಡ್ಕರ್:**

ಮಹಿಳಾ ಮೀಸಲಾತಿ ಕುರಿತು ದಶಕಗಳಿಂದ ಮಾತು ಕೇಳಿಬರುತ್ತಿದ್ದರೂ ಬೆರಳೆಣಿಕೆಯಷ್ಟು ಮಹಿಳೆಯರು ಗೌರವಾನ್ವಿತ ಹುದ್ದೆಯಲ್ಲಿದ್ದಾರೆ. ಅದರಲ್ಲೂ ಕಾನೂನಿನ ಒತ್ತಾಯವಿಲ್ಲದಿದ್ದರೆ ರಾಜಕೀಯ ಪಕ್ಷಗಳಾಗಲೀ, ಸಮಾಜವಾಗಲೀ ಅವಕಾಶವಂಚಿತರಿಗೆ ಯಾವ ಅವಕಾಶವನ್ನೂ ಮೀಸಲಿಡುವುದಿಲ್ಲ ಅಲ್ಲದೆ ಕಾನೂನಿನ ಬೆಂಬಲವಿದ್ದರೂ ಅದನ್ನು ನಿರುಪಯೋಗಿಯಾಗಿಸುವ ರಾಜಕೀಯ ಹುನ್ನಾರಗಳೂ ದಿನನಿತ್ಯ ಸಂಭವಿಸುತ್ತಿವೆ.

ಈ ಎಲ್ಲ ತಾರತಮ್ಯಕ್ಕೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕಾರಣವಾಗಿರುವುದು ಜಾತಿಪದ್ಧತಿ. ಅದು ಭಾರತದಲ್ಲಿ ಹೇಗೆ ಹುಟ್ಟಿತು ಎಂಬ ಬಗ್ಗೆ ಅತ್ಯಂತ ವೈಜ್ಞಾನಿಕ ವಿವರಣೆ ನೀಡಿದವರು ಅಂಬೇಡ್ಕರ್. ಜಾತಿ ವಿನಾಶವಾಗದ ಹೊರತು ಹೆಣ್ಣಿಗೆ ಪರಿಪೂರ್ಣ ಬಿಡುಗಡೆ ಒದಗಲಾರದೆಂದು ಭಾರತದ ಇವತ್ತಿನ ಸ್ತ್ರೀವಾದಿಗಳು, ಮಹಿಳೆಯರು ಅರ್ಥ ಮಾಡಿಕೊಂಡದ್ದು ಅಂಬೇಡ್ಕರ್‌ರ ಜಾತಿ ವಿಶ್ಲೇಷಣೆಯನ್ನು ಓದಿದ ಬಳಿಕ. ಜಾತಿವ್ಯವಸ್ಥೆಯ ಉಪಉತ್ಪನ್ನವಾದ ಪಿತೃಪ್ರಾಧಾನ್ಯತೆಯ ಆಳವಿಸ್ತಾರಗಳನ್ನರಿಯಲು ಸಾಧ್ಯವಾಗಿಸಿದ್ದೂ ಅಂಬೇಡ್ಕರ್‌ರ ಚಿಂತನೆಗಳೇ.

ತಮ್ಮ ಜಾತಿವಿನಾಶ ಪ್ರಬಂಧದಲ್ಲಿ ಅಂಬೇಡ್ಕರ್ ಹೇಳಿರುವಂತೆ ಪ್ರಾಚೀನ ಕಾಲದ ಭಾರತೀಯ ಸಮಾಜ ವರ್ಣ, ಜಾತಿಗಳಾಗಿ ಶ್ರೇಣೀಕರಣಗೊಳ್ಳಲು ಪ್ರಾರಂಭಿಸಿದ ದಿನವೇ ಹೆಣ್ಣಿನ ಹಕ್ಕು, ಅಧಿಕಾರಗಳು ಮೊಟಕುಗೊಳ್ಳಲೂ ಶುರುವಾದವು. ಜಾತಿಪದ್ಧತಿ ಹುಟ್ಟಿದ್ದು ಹೆಣ್ಣಿನ ಲೈಂಗಿಕತೆಯನ್ನು ಚೌಕಟ್ಟಿಗೊಳಪಡಿಸಿ ನಿರ್ಬಂಧಿಸುವ ಮೂಲಕ. ಜಾತಿಪದ್ಧತಿ ಬೆಳೆದಿದ್ದು ಒಳವಿವಾಹ ಚಾಲ್ತಿಗೆ ತರುವ

ಮೂಲಕ. ಜಾತಿಪದ್ಧತಿ ಉಳಿದಿದ್ದು ತನಗೆ ಲಭ್ಯವಿರುವ ಹೆರುವ ಹೆಣ್ಣುಗಳನ್ನು ತನಗೆಂದೇ ಕಾಯ್ದಿಟ್ಟುಕೊಳ್ಳುವ ಮೂಲಕ. ಒಟ್ಟಾರೆ ಜಾತಿ ವ್ಯವಸ್ಥೆಯೆನ್ನುವುದು ಹೆಣ್ಣಿನ ಲೈಂಗಿಕತೆ, ಆಯ್ಕೆಯನ್ನಷ್ಟೆ ನಿರ್ಬಂಧಗೊಳಿಸಲಿಲ್ಲ; ಅವಳನ್ನು ಶಾಶ್ವತವಾಗಿ ನಿರ್ಬಂಧಿತ ಸ್ಥಿತಿಯಲ್ಲಿಡಲು ಅನುಕೂಲವಾಗುವ ಆಚರಣೆ, ರೂಢಿ, ಪರಿಕಲ್ಪನೆಗಳನ್ನು ಜಾರಿ ಮಾಡಿತು. ಜ್ಞಾನ, ಅವಕಾಶ, ಆರ್ಥಿಕ ಸಂಪನ್ಮೂಲ, ಅಧಿಕಾರ ಈ ಎಲ್ಲ ನೆಲೆಗಳಿಂದಲೂ ಹೆಣ್ಣನ್ನು ವಂಚಿಸಿ ಅಂಚಿಗೆ ತಳ್ಳಲಾಯಿತು. ಭಾರತೀಯ ಸಮಾಜದ ಸಾಮಾಜಿಕ, ಆರ್ಥಿಕ ಅಸಮಾನ ರಚನೆಗಳೇ ಲಿಂಗತಾರತಮ್ಯದ ಮೂಲ ಕಾರಣವಾಗಿ ಇವತ್ತಿಗೂ ಮುಂದುವರೆದಿವೆ.

ವಾಸ್ತವ ಹೀಗಿದ್ದರೂ 'ಸ್ತ್ರೀವಾದವೆಂಬುದೇ ಪಾಶ್ಚಾತ್ಯ ಪರಿಕಲ್ಪನೆ. ಭಾರತದಲ್ಲಿ ಲಿಂಗವಿಶಿಷ್ಟ ಜವಾಬ್ದಾರಿಗಳಿವೆ; ಲಿಂಗ ಅನನ್ಯತೆಯ ಕುರುಹಾದ ಆಚರಣೆಗಳಿವೆಯೇ ಹೊರತು ಲಿಂಗತಾರತಮ್ಯ ಇಲ್ಲ' ಎನ್ನುವುದು ಸನಾತನ ಭಾರತ ಸಂಸ್ಕೃತಿಯ ಪ್ರತಿಪಾದಕರ ಆರೋಪ. ಆದರೆ ಭಾರತದಲ್ಲಿ ಅನಾದಿಯಿಂದ ರೂಪುಗೊಂಡಿದ್ದ ಮುಕ್ತ ಚಿಂತನೆಯ ಫಲವೋ ಎನ್ನುವಂತಿರುವ ಅಂಬೇಡ್ಕರ್ ಚಿಂತನೆಗಳು ಇಲ್ಲಿನ ಸ್ತ್ರೀವಾದಿ ಹೋರಾಟಗಳ ತಾತ್ವಿಕತೆಯಾಗುವಷ್ಟು ಗಟ್ಟಿತನ ಪಡೆದಿವೆ. ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ಮೂರು ಮಾರ್ಗಗಳ ಅವರ ದೇಶೀ ಮಾದರಿಯು ಮಹಿಳಾ ಹಕ್ಕು ಜಾಗೃತಿ ಮೂಡಿಸಲು ಕ್ರಾಂತಿಕಾರಕ ಮಾದರಿಯಾಗಿದೆ.

ಭಾರತದಲ್ಲಿ ಮೊದಲ ಹಂತದ ಮಹಿಳಾ ಚಳುವಳಿ ಜಾತಿಪ್ರಶ್ನೆಯನ್ನು, ಅಂಬೇಡ್ಕರ್ ಚಿಂತನೆಗಳನ್ನೂ ಗಂಭೀರವಾಗಿ ಪರಿಗಣಿಸದಿದ್ದರೂ ವರ್ಗ–ಅಧಿಕಾರ–ಕುಟುಂಬ ರಚನೆಗೆ ಸಂಬಂಧಿಸಿದ ಪ್ರಶ್ನೆಗಳ ಕಡೆ ಚಿಂತಿಸತೊಡಗಿತು. ನಂತರ ಜಾತಿಯೆಂಬ ವಾಸ್ತವವನ್ನುದ್ದೇಶಿಸದ ಹೊರತು ಇಲ್ಲಿ ಯಾವ ಹೋರಾಟವೂ ಅರ್ಥಪೂರ್ಣವಾಗದೆಂಬ ಅರಿವಾದಾಗ ಮಹಿಳಾ ಚಿಂತಕರು ಜಾತಿ ಮತ್ತು ಲಿಂಗಪ್ರಶ್ನೆಯನ್ನು ಒಟ್ಟೊಟ್ಟಿಗೆ ನೋಡತೊಡಗಿದರು. ಅದಕ್ಕೆ ಆಧಾರವಾಗಿ ಅಂಬೇಡ್ಕರ್‌ರ ಚಿಂತನೆಗಳನ್ನು ಬಳಸಿಕೊಂಡರು. ಆದರೂ ಭಾರತದ ಮಹಿಳೆಯರಿಗೆ ಜಾತಿ–ಧರ್ಮ–ಕುಟುಂಬಗಳು ಒಂದರೊಳಗೊಂದು ಹೆಣೆದುಕೊಂಡಿರುವ ಕಾರಣವಾಗಿ ಪರಿಣಾಮಕಾರಿ ಜಾತ್ಯತೀತ ಹೋರಾಟ ಕಟ್ಟುವುದು ಕಷ್ಟಸಾಧ್ಯವಾಗಿದೆ. ಅದಕ್ಕೆ ಕಾರಣ ಜಾತಿ–ಧರ್ಮಗಳೆಂಬ ಸಂಸ್ಥೆಗಳು ತಮ್ಮ ರಚನೆಯಲ್ಲಿಯೇ ಮಹಿಳಾ ವಿರೋಧಿಗಳೆಂದು ಜನರಿಗೆ ಅರ್ಥ ಮಾಡಿಸಲು ಚಳುವಳಿಗೆ ಸಾಧ್ಯವಾಗದೇ ಇರುವುದು. ಒಂದು ಕಡೆ ಜಾತಿಧರ್ಮದ ಆಧಾರದ ಮೇಲೆ ಮನುಷ್ಯರನ್ನು ಒಡೆಯುವ, ಅಸಹನೆ ಹುಟ್ಟಿಸುವ ಕೋಮುವಾದವು ಮಹಿಳೆಯರನ್ನು ದಾಳವಾಗಿ ಬಳಸಿಕೊಳ್ಳುತ್ತಿದೆ. ಎಲ್ಲ ಧಾರ್ಮಿಕ, ಸಾಂಸ್ಕೃತಿಕ ಸಂಕೇತಗಳಲ್ಲಿ ಹೆಣ್ಣನ್ನು ಯಥೇಚ್ಛವಾಗಿ ಬಳಸಿಕೊಳ್ಳುತ್ತಿದೆ. ಭಾರತದ ಬಹುಪಾಲು ಹೆಣ್ಮಕ್ಕಳು ಧರ್ಮ ಮತ್ತದು

ವಿಧಿಸಿರುವ ಕೌಟುಂಬಿಕ–ನೈತಿಕ ಚೌಕಟ್ಟಿನಿಂದ ಹೊರಬರಲಾರದವರಾಗಿ ಉಸಿರು ಕಟ್ಟಿಸುವ ಬಿಗಿಯನ್ನು ಸುರಕ್ಷೆಯೆಂದು ನಂಬಿದ್ದಾರೆ.

ಇನ್ನೊಂದು ಕಡೆ ಮಾರುಕಟ್ಟೆಯು ಸೃಷ್ಟಿಸಿರುವ ಭ್ರಮಾತ್ಮಕ ಜಗತ್ತಿನಲ್ಲಿ, ಬಂಡವಾಳಶಾಹಿಗಳ ಲಾಭಕೋರ ನಡೆಗಳಲ್ಲಿ ಬಲಿಪಶುವಾಗುತ್ತಿರುವುದು ಹೆಣ್ಣು ಮತ್ತು ಅವಳ ದೇಹವೇ ಆಗಿದೆ. ಎಲ್ಲವೂ ಸರಕಾಗಿರುವ ಕಾಲದಲ್ಲಿ ಹೆಣ್ಣು, ಹೆಣ್ತನ, ಗರ್ಭಕೋಶ ಎಲ್ಲವೂ ಕಚ್ಚಾವಸ್ತುಗಳಾಗಿವೆ. ಸರಕೀಕರಣ ಸೃಷ್ಟಿಸಿರುವ ಕೊಳ್ಳುಬಾಕತನಕ್ಕೆ ಹಣವೇ ಮೌಲ್ಯ. ಅಲಂಕರಣವೇ ಸೌಂದರ್ಯ. ಆರೋಗ್ಯ, ನೈತಿಕತೆ, ಸಹಬಾಳ್ವೆ, ಚಿಂತನೆಗಳಿಗೆ ಸಮಯವೇ ಇಲ್ಲವಾಗಿದೆ.

ಹೀಗೆ ಧರ್ಮ‌ರಾಜಕಾರಣ ಮತ್ತು ಮಾರುಕಟ್ಟೆ ಹುಟ್ಟುಹಾಕಿರುವ ಸಾಮಾಜಿಕ ಬದಲಾವಣೆಗಳು ಮಹಿಳೆಯರ ಮತ್ತು ಶೋಷಿತರ ಚಳುವಳಿ ಕಟ್ಟಲು ಇರುವ ದೊಡ್ಡ ತೊಡಕುಗಳಾಗಿವೆ. ಆದ್ದರಿಂದ ಪ್ರಜಾಪ್ರಭುತ್ವ, ಧರ್ಮ, ರಾಷ್ಟ್ರೀಯತೆ, ಮಾರುಕಟ್ಟೆ ಮತ್ತಿತರ 'ಒಪ್ಪಿತ' ವ್ಯವಸ್ಥೆಗಳನ್ನು ಪ್ರಶ್ನಿಸುತ್ತಲೇ ಅವನ್ನು ಅರ್ಥಪೂರ್ಣಗೊಳಿಸುವ ಜವಾಬ್ದಾರಿ ಮಹಿಳೆಯರ ಮೇಲಿದೆ. ಜೊತೆಗೆ ಮದುವೆ ಮತ್ತು ಕುಟುಂಬ ಎಂಬ ಸಾಮಾಜಿಕ ರಚನೆಗಳನ್ನು ಹಾಗೂ ಧರ್ಮ/ ರಾಜಕಾರಣಗಳನ್ನು ಚಲನಶೀಲಗೊಳಿಸುವ ಜವಾಬ್ದಾರಿಯೂ ಹೆಣ್ಮಕ್ಕಳ ಮೇಲಿದೆ. ಕೌಟುಂಬಿಕ ಹಾಗೂ ವೈಯಕ್ತಿಕ ಬದುಕಿನಲ್ಲಿ ಬದಲಾವಣೆ ತರುವತ್ತ ಚಳುವಳಿಗಳು ಗಮನ ಹರಿಸಬೇಕಿದೆ. ಇಂದಿಗೂ ಕುಟುಂಬಗಳಲ್ಲಿ ಗಂಡು ಮಕ್ಕಳ ವ್ಯಾಮೋಹ ಹೆಚ್ಚಾಗಿದ್ದೂ ಆಹಾರ, ಆರೋಗ್ಯ ಮತ್ತು ಅರಿವು ಈ ಮೂಲಭೂತ ಅವಶ್ಯಕತೆಗಳ ಹಂಚಿಕೆಯಲ್ಲಿಯೂ ಹೆಣ್ಣು ಮಕ್ಕಳ ವಿಚಾರದಲ್ಲಿ ತಾರತಮ್ಯವನ್ನು ತಪ್ಪಿಸಬೇಕಾಗಿದೆ. ಇಬ್ಬರನ್ನು ಸಮಾನಾಗಿ ಕಾಣುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಾಗಿದೆ.

## ಪರಾಮರ್ಶನ ಗ್ರಂಥಗಳು:


1. ಅಂಬೇಡ್ಕರ್ ಬಿ. ಆರ್. , (2015), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು.
2. ಪ್ರಮಿಳಾ ಬಾರ್ಕೂರು. (2024). ಮಹಿಳಾ ವಿಮೋಚನೆ: ವಿವಿಧ ಆಯಾಮಗಳು. ಅಕ್ಷರಸೂರ್ಯ (AKSHARASURYA), 5(04), 132 to 141. Retrieved from https://akshara–surya. com/index. php/latest/article/view/569
3. ಹೇಮಲತಾ, (2009), ಮಹಿಳಾ ಶಿಕ್ಷಣದ ಮಹತ್ವ, ಬೆಳವಣಿಗೆ ಹಾಗೂ ಸಶಕ್ತೀಕರಣ, ಡಿ. ವಿಕೆ. ಮೂರ್ತಿ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.